7. ಚಿನ್ನಕೆಲಸದ ಲಿಂಗಣ್ಣಾಚಾರಿ
8. ಚಿನ್ನಕೆಲಸದ ವೇಲಾಯುಧಾಚಾರಿ
9. ಮರಕೆಲಸದ ವೈಯಾಪುರಿಯಾಚಾರಿ
10. ಚಿನ್ನಕೆಲಸದ ದೊಡ್ಡಸುಬ್ಬಂಣಾಚಾರಿ
11. ಹುಣಸೂರು ಟವರ್ಗೆ ಕೇರಿದ ಪುಲ್ಲುಕಾಣಿಕೆಯಲ್ಲಿರುವ ನರಸುಹ್ಮಾಚಾರಿ
12. ಡಿಟೋ ಲಕ್ಷ್ಮೀಪತಿಯಾಚಾರಿ
13. ಡಿಟೋ ಲಕ್ಷ್ಮಂಣಾಚಾರಿ
14. ಹುಣಸೂರಲ್ಲಿಯಿರುವ ಮರಗೆಲಸದ ಷಣ್ಮುಖಾಚಾರಿ ವಗೈರೆ

ಪ್ರತಿವಾದಿಗಳು—ಹುಣಸೂರಲ್ಲಿಯಿರುವವರು,

1. ರಾಮಾಸ್ವಾಮಿ ಆಚಾರಿ ಮಗ ಕುಳ್ಳಾಚಾರಿ
2. ಚಿನ್ನಕೆಲಸದ ಶೇಷಾಚಾರಿ
3. ಚಿನ್ನಕೆಲಸದ ಡಿಟೋ ನರಸಾಚಾರಿ
4. ಬಿಳಿಕೆರೆನಂಜಪ್ಪಾಚಾರಿ
5. ನಾರಾಯಣಸ್ವಾಮಿ ಆಚಾರಿ
6. ಡಿಟೋ ಕಂಚುಗಾರ ಅಮಯ್ಯಪ್ಪಾಚಾರಿ
7. ಡಿಟೋ ಮರಕೆಲಸದ ಕಾಳಪ್ಪಾಚಾರಿ ವಗೈರೆ

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷರ್ಷ ಮೇರೆ ಹುಣಸೂರು ಟವನಿನಲ್ಲಿ ಯಿರುವ ಸಮಸ್ತ ಜನಗಳಿಗೂ ತಿಳಿಯುಪಡಿಸುವದೇನಂದರೆ,—

ಮೇಲ್ಕಂಡ ಮೊಕದ್ದಮೆಯಲ್ಲಿನ ವಾದಿಯಾದವರು, ಈ ಮೊಕದ್ದಮಾವನ್ನು ತಮ್ಮ ಪರವಾಗಿಯೂ ಮತ್ತು ತಮ್ಮ ಜಾತಿ ಇತರ ಜನಗಳ ಪರವಾಗಿಯೂ ದಾವಾ ದಾಖಲ್ಮಾಡಲು ಕೋರ್ಟಿನವರ ಅಪ್ಪಣೆಯನ್ನು ಪ್ರಾರ್ಥಿಸಿದ್ದಾರೆಂದುನ್ನೂ 1—2ನೇ ವಾದೀರು ಈ ಛತ್ರದ ಸುಫರ್ದನ್ನು ಹೊಂದಲು, ಮತ್ತು ಈ ಛತ್ರಕ್ಕೆ ಬೀಗಹಾಕುವದು ತೆಗಿಯುವದು ವಗೈರೆಯನ್ನು ಈ ಛತ್ರದ ಇತರ ಆಡಳಿತಗಳನ್ನ ನಡಿಸಲು, ಹಕ್ಕುದಾರರೆಂತ್ತ ಹಕ್ಕು ಸ್ಥಾಪಿಸಿ ಪ್ರತಿವಾದೀರಿಂದ ಛತ್ರವನ್ನು ವಾದೀರ ಸುಫರ್ದಿಗೆ ಕೊಡಿಸಬೇಕೆಂತಲೂ ಮತ್ತು ಪ್ರತಿವಾದೀರೆಲ್ಲರೂ ಸಹ 1—2ನೇ ವಾದೀರ ಅನುಭವದಲ್ಲಿ ಹತ್ತು ಜನರಂತೆ ವುಪಾಕರ್ಮ, ಶಿವರಾತ್ರಿ, ಭಜನೆ, ಜಾತಿ ಪಂಚಾಯಿತಿ ವಗೈರೇ ಎಲ್ಲಾ ಕೆಲಸಗಳಿಗೂ ಸಹ ಈ ಛತ್ರಕ್ಕೆ ಪ್ರವೇಶಿಸಿ ಈ ಛತ್ರವನ್ನು ವುಪಯೋಗಿಸಬಹುದೆಂತ್ತಲೂ ಮತ್ತು ಮೈಸೂರು ಟವ್ನ ಮೇಜಿಸ್ಟ್ರೇಟರವರು ಮಾಡಿದ 1894—95ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ 232ನೇ ನಂಬರು ಆರ್ಡರನ್ನು ರದ್ದುಪಡಿಸಿ ಹಾಲಿ ಪ್ರತಿವಾದೀರು, ವಾದೀರು ಛತ್ರಕ್ಕೆ ಪ್ರವೇಶಿಸಿ ಛತ್ರವನ್ನು ವುಪಯೋಗಿಸಲು ಇರುವ ಪ್ರತಿಬಂಧಕವನ್ನು ತಪ್ಪಿಸಬೇಕೆಂತಲೂ,

B. ಹಾಗೆ ವಾದೀರೊಬ್ಬರೇ ಸುಫರ್ದು ಹೊಂದಲು ಅಥವಾ 1—2ನೇ ವಾದೀರಲ್ಲಿ ಪ್ರವೇಶಿಸಬೇಕೆಂತ ಡಿಕ್ರಿಕೊಡಲು ಆಗುವ ವಿಲ್ಲವೆಂತ ಒಂದು ವೇಳೆ ಕೋರ್ಟಿನವರಿಗೆ ತೋರಿಬಂದಲ್ಲಿ ಪ್ರತಿವಾದೀರಂತೆ ವಾದೀರಿಗೂ ಈ ಛತ್ರದ ಜಂಟಿ ಸುಫರ್ದನ್ನು ಕೊಡಿಸಬೇಕೆಂತ್ತಲೂ,

C. ಈ ಮೊಕದ್ದಮಾ ಕೋರ್ಟ್ ಖರ್ಚು ಮತ್ತು ಕೋರ್ಟಿನವರಿಗೆ ದುಕ್ತತೋರುವ ಇನ್ನೂ ಇತರ ಪರಿಹಾರಗಳಿಗೂ ಸಹ ದಾವಾ ದಾಖಲ್ಮಾಡಿರುತ್ತಾರೆಂದುನ್ನೂ ಸದರ್ ಮೊಕದ್ದಮಾ 1896ನೇ ಇಸವಿ ಅಕ್ಟೋಬರು 29ನೇ ತಾರೀಖಿಗೆ ಯಿಷ್ಯೂಬಗ್ಗೆ ಹಿಯರಿಂಗು ಯಿಟ್ಟು ಇರುವದರಿಂದ ಈ ಮೊಕದ್ದಮಾಕ್ಕೆ ಕಕ್ಷಿಗಾರನಾಗಿ ಶೇರಬೇಕೆಂದು ಯಿರುವ ಸಮಸ್ತ ಜನಗಳೂ ಈ ಕೋರ್ಟ್ ರೂಬರೂ ಮೇಲ್ಕಂಡ ತಾರೀಖಿಗೆ ಹಾಜರಾಗತಕ್ಕದ್ದೆಂದು ಪ್ರಸಿದ್ಧಪಡಿಸಿಧೆ.

31—8—96.

ವಿ. ರಂಗಾಚಾರ್,
ಸೆಷನ್ಸ್ ಜಡ್ಜ್.

ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮೈಸೂರ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 3ನೇ ಅಕ್ಟೋಬರ್ 1896.

ಮೈಸೂರು ಡಿಸ್ಟ್ರಿಕ್ಟ್ ಇದರಲಿ ಕಂಡ ಫಾರೆಸ್ಟ್ಗಳಿಂದ ಅವುಗಳ ಬಾಜೂದಲ್ಲಿ ತೋರಿಸಲ್ಪಡುವ ಆಯಾ ಅಂಚಿಕೆಗಳಿಗೆ ಸ್ಯ 1897ನೇ ಇಸವಿ ಜನವರಿ ತಾರೀಖು 15ರ ವಳಗಾಗಿ ವಣ ನಾಟಾ ಸಾಗಿಸುವದಕ್ಕೆ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಫಾರೆಸ್ಟ್.	ಅಂಜಿಕೆ.	ಲದ್ದೆಮಾಡತಕ್ಕ ಮೊತ್ತ.	ಸರಾಸರಿ ಫಾಸಲೆ.
ಹೆಗ್ಗಡದೇವನಕೋಟೆ.	ಬೇಗೂರು ..	(1) ಗುಂಡ್ಲು ..	2,000	
		(2) ಬೈರಿಗದ್ದೆ ..	4,000	
		(3) ವನಕೆಗುಂಡಿಮಾಳ ..	2,000	
	ಐನೂರುಮಾರಿಗುಡಿ ..	(1) ಕಲ್ಲುಕೆರೆ ..	4,000	
		(2) ವಾರಂಚಿ ..	2,000	
		(3) ಹಿಂಡುಸ್ಕಾಲ್ ಕಟ್ಟೆ ..	2,000	
	ಕಾಕನಕೋಟೆ ..	(1) ಆನೆಮಾಳ ..	2,000	
		(2) ತ್ಯಾಗದಮರದ ತಿಟ್ಟು ..	2,000	
		ಜುಮ್ಲಾ ..	20,000	

2. ತಮೊಂ ದರಖಾಸ್ತುಗಳೂ "ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಫಾರೆಸ್ಟುಗಳಿಂದ ಅಂಜಿಕೆಗಳಿಗೆ ಸಾಗಿಸುವದಕ್ಕೆ ಮಾತ್ರವೇ, ದರಖಾಸ್ತು" ಯಂಬುವದಾಗಿ ಮೇಲ್‌ವಿಳಾಸ ಬರದು ಮೊಹರುಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಪ್ರತಿ ಬಂದು ಫಾರೆಸ್ಟಿಗೂ 50 ರೂಪಾಯಿ ಬೆಲೆಯುಳ್ಳ ಕರೆಸೀನೋಟುಗಳಿ, ಯಾ ಪ್ರೊನೋಟುಗಳಿ ರವಾನಿಸಬೇಕು. ದರಖಾಸ್ತುಗಳು ಅಜಮಾಯಿಷಿಯಿಂದ ಮೇಲ್ಕಂಡ ಕರೆಸೀನೋಟುಗಳನ್ನು ಮಾಪಸು ಮಾಡಲ್ಪಡುವವು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ 1896ನೇ ಇಸವಿ ಆಕ್ಟೋಬರು 31ನೇ ತಾರೀಖು ವರೆಗೆ ಅಂಗೀಕರಿಸಲ್ಪಡುವವು.

4. ದರಖಾಸ್ತು ಮಾಡಲು ಇಚ್ಛೈವುಳ್ಳ ಕಂಟ್ರಾಕ್ಟುದಾರನು ಮೇಲ್ಕಂಡ ಫಾರೆಸ್ಟುಗಳ ಪೈಕಿ ಯೊಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ, ತಯಾರಾದ್ದನ್ನ ಸಾಗಿಸುವದಕ್ಕೆ ಮಾತ್ರ, ದರಖಾಸ್ತು ಮಾಡಿದ ಪಕ್ಷದಲ್ಲಿ ನಾಟುವನ್ನು ಪ್ರತಿ ಯೊಂದು ಫಾರೆಸ್ಟಿನಿಂದಲೂ ಅಂಜಿಕೆಗಳಿಗೆ ಸಾಗಿಸುವದಕ್ಕೆ ಮಾತ್ರ, ಯೊಪ್ಪಿಕೊಳ್ಳುವ, ಕಮ್ಮಿ ದರವನ್ನು ಬೇರೆ ಬೇರೆಯಾಗಿ ನಮೂದಿಸತಕ್ಕದ್ದು. ಸಲೆ ಆಡಿ 1ಕ್ಕೆ ಇಷ್ಟು ದರವೆಂತ ನಮೂದಿಸಬೇಕು.

5. ಸ್ಯ 1897ನೇ ಇಸವಿ ಜನವರಿ 17ರ ಯೊಳಗಾಗಿ ಮೇಲೆ ನಮೂದಿಸಿರುವ ಪೂರಾ ಮೊತ್ತವನ್ನು ಆಯಾಯ ಅಂಜಿಕೆಗಳಿಗೆ ಸಾಗಿಸಬೇಕು.

6. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡದುಕೊಳ್ಳುವ ಬಗ್ಗೆ ಜಾಮೀನು ತರೀಕ ಫಾರೆಸ್ಟು 1ಕ್ಕೆ 100 ರೂಪಾಯಿ ಪ್ರಕಾರ ಡಿಪಾಜಿಟ್ಟು ಕಟ್ಟತಕ್ಕದ್ದು. ಮೇಲ್ಕಂಡ ಷರತ್ತು ಮೇರೆ ನಡಿಯಲು ತಪ್ಪಿದಲ್ಲಿ ಠೇವಣೀ ಮೊಬಲಗನ್ನ ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಡುವದು.

7. ಬ್ಯಾಸಿಗೆ ಕಾಲದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಮಾಡಲ್ಪಡುವ ಕಾಯಿದೆ ಕಾನೂಗಳಂತೆ ನಡಿಯಲು ಕಂಟ್ರಾಕ್ಟುದಾರನು ಬದ್ಧನಾಗಿರುವನು.

8. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಕಮ್ಮಿದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟು ಕ್ವಸರ್ವೇಟರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟು ಇರುತ್ತೆ.

9. ಸಾಮಾನುಗಳು ಸಾಗಿಸುವದಕ್ಕೆ ಗಾಡಿ, ರಸ್ತೆ ವಗೈರೇ ದಾರಿಗಳನ್ನು ಮಾಡಿಕೊಡಲು ಸರ್ಕಾರದವರು ಬದ್ಧರಾಗಿಲ್ಲವಾದ ಸಬಬು ವುದ್ದೇಸಿಸುವ ಕಂಟ್ರಾಕ್ಟುದಾರನೇ ಆತನ ಹಾತಲಾಗವಡಿನಿಂದ ತಕ್ಕ ಯೇರ್ಪಾಡುಗಳು ಮಾಡಿಕೊಳ್ಳತಕ್ಕದ್ದು. ಮರಗಳನ್ನು ಸಾಗಿಸದೆ, ಇರುವದಪಕ್ಷ ಯಾವ ಸಬಬುಗಳನ್ನೂ ಅಂಗೀಕರಿಸಲಾರೆವು.

10. ವುದ್ದೇಸಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ವಿಚಾರಿಸಿ ತೆಗದುಕೊಳ್ಳಬಹುದು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ನಗರದ ಡಿವಿಜ್ಞ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸ್ಯ 1896-97ನೇ ಇಸವಿ ಅರ್ಜಿ ನಂಬರ್ 82.

ಮೃತಪಟ್ಟ ಚಿತ್ರದುರ್ಗದ ವಾಸಸ್ಥ ತಿಮ್ಮಪ್ಪಶಾಸ್ತ್ರಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚಿತ್ರದುರ್ಗದಲ್ಲಿರುವ ಕೃಷ್ಣಶಾಸ್ತ್ರಿ ಬಿನ್ ತಿಮ್ಮಣ್ಣಶಾಸ್ತ್ರಿಯು. ಮೃತಪಟ್ಟ ಸದರೀ ತಿಮ್ಮಪ್ಪಶಾಸ್ತ್ರಿಯು ತನಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿತ್ರದುರ್ಗ ಸ್ಥಳದ ಕೃಷ್ಣಶಾಸ್ತ್ರಿ ಬಿನ್ ತಿಮ್ಮಣ್ಣಶಾಸ್ತ್ರಿಯು, ಚಿತ್ರದುರ್ಗದ ವಾಸಸ್ಥನಾಗಿ ಮೃತಪಟ್ಟ ತಿಮ್ಮಪ್ಪಶಾಸ್ತ್ರಿಯ ಜಿಂದಗಿ ಖರ್ಚಾಗಿ ಬರತಕ್ಕ 110 ರೂಪಾಯಿ ನಗದು 80 ರೂಪಾಯಿ ದಾವಾಕೆ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.